**ಪಾಠ-10** **ಆಗಸ್ಟ್ 29-ಸೆಪ್ಟೆಂಬರ್ 4**

# ಭಾಗಿಯಾಗುವುದಕ್ಕೆ ಒಂದು ಅತ್ಯಾಕರ್ಷಕ ಮಾರ್ಗ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 1:1,2,26: ವಿಮೋಚನಕಾಂಡ 18:21–25; 1 ಕೊರಿಂಥ 12:12–25; ಅಪೋಸ್ತಲರ ಕೃತ್ಯಗಳು 16:11–15,40; ಅಪೊಸ್ತಲರ ಕೃತ್ಯಗಳು 4:31; ಅಪೊಸ್ತಲರ ಕೃತ್ಯಗಳು 12:12.

**ಸ್ಮರಣವಾಕ್ಯ : "ಆಗ ತನ್ನ ಶಿಷ್ಯರಿಗೆ ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದುದರಿಂದ ಬೆಳೆಯ ಯಾಜಮಾನನನ್ನು ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು"** (ಮತ್ತಾಯ 9:37,38).

"ಸಮುದಾಯದಲ್ಲಿ ಬಲವಿದೆ" ಎಂದು ಯಾರೋ ಒಬ್ಬರು ಹೇಳಿದ್ದಾರೆ. ಒಂದು ಅರ್ಥದಲ್ಲಿ ಅದು ನಿಜ. ಪ್ರತಿದಿನ ನೀವು ಏಕಾಂಗಿಯಾಗಿ ಅಭ್ಯಾಸ ಮಾಡುವುದಕ್ಕಿಂತ ಒಂದು ಗುಂಪಿನ ಜನರೊಂದಿಗೆ ಅಭ್ಯಾಸ ಮಾಡಿದರೆ, ನೀವು ಅತಿಹೆಚ್ಚು ಉತ್ತೇಜನ ಹೊಂದುವಿರೆಂದು ಎಂದಾದರೂ ಗಮನಿಸಿದ್ದೀರಾ? ಅನೇಕ ಜನರು ಆರೋಗ್ಯ ಸಂಘಗಳು, ಜಿಮ್‌ಗಳು, ವ್ಯಾಯಾಮ ಸೌಲಭ್ಯಗಳಿರುವ ಕಡೆಗೆ ಸೇರಿಕೊಳ್ಳುತ್ತಾರೆ. ಯಾಕೆಂದರೆ ಅವರು ಹೆಚ್ಚು ಅಭ್ಯಾಸ ಮಾಡುತ್ತೇವೆಂದು ನಂಬುತ್ತಾರೆ ಮತ್ತು ಇತರ ಜನರೊಂದಿಗೆ ಅಭ್ಯಾಸ ಮಾಡಿದರೆ, ಅದನ್ನು ಹೆಚ್ಚಾಗಿ ಆನಂದಿಸಬಹುದು ಎಂದು ನಂಬುತ್ತಾರೆ. ಇದೇ ರೀತಿಯಲ್ಲಿ, ದೇವರು ನಮ್ಮನ್ನು ಸಹಭಾಗಿತ್ವಕ್ಕಾಗಿ ಸೃಷ್ಟಿಸಿದ್ದಾನೆ. ಅಭ್ಯಾಸದೊಂದಿಗೂ, ಜೀವನದಲ್ಲಿನ

ಅನೇಕ ವಿಷಯಗಳೊಂದಿಗೂ ನಾವು ಸಾಮಾಜಿಕ ಜೀವಿಗಳೆಂಬುದು ನಿಜವಾಗಿದೆ. ನಮಗೆ ಸಾಮಾಜಿಕ ಬೆಂಬಲದ ವ್ಯವಸ್ಥೆ ಸಿಕ್ಕರೆ ನಾವು ಉತ್ತಮವಾಗಿ ಕಾರ್ಯನಿರ್ವಹಿಸುತ್ತೇವೆ. ಇದು ವಿಶೇಷವಾಗಿ ಆಧ್ಯಾತ್ಮಿಕ ವಿಷಯಗಳಲ್ಲಿ ನಿಜವಾಗಿದೆ.

ನಿಮ್ಮ ವಿಶ್ವಾಸವನ್ನು ಹೆಚ್ಚಿಸುವುದಕ್ಕೂ ಆತನ ವಾಕ್ಯದಲ್ಲಿ ನಮ್ಮ ಜ್ಞಾನವನ್ನು ಹೆಚ್ಚಿಸುವುದಕ್ಕೂ, ನಮ್ಮ ಪ್ರಾರ್ಥನಾ ಜೀವಿತವನ್ನು ಸದೃಢಗೊಳಿಸುವುದಕ್ಕೂ ಮತ್ತು ಸಾಕ್ಷಿಯಾಗಲೂ ನಮ್ಮನ್ನು ಸಜ್ಜುಗೊಳಿಸುವುದಕ್ಕೂ, ದೇವರ ವಿಧಾನಗಳಲ್ಲಿ ಒಂದಾದ ಸಣ್ಣಗುಂಪುಗಳನ್ನು ಎತ್ತಿ ತೋರಿಸಲಾಗಿದೆ. ತಂದೆ, ಮಗ ಮತ್ತು ಪವಿತ್ರಾತ್ಮನು ಸಣ್ಣ ಗುಂಪಿನ ಸೇವೆಯಲ್ಲಿ ಭಾಗವಹಿಸಿದ್ದಾರೆ. ಮೋಶೆಯು ಸಣ್ಣ ಗುಂಪಿನ ನಾಯಕನಾಗಿದ್ದನು. ಯೇಸು ತನ್ನ ಶಿಷ್ಯರ ಸಣ್ಣ ಗುಂಪನ್ನು ಸ್ಥಾಪಿಸಿದನು, ಮತ್ತು ಅಪೋಸ್ತಲನಾದ ಪೌಲನು ತನ್ನ ಸುವಾರ್ತಾ ಬೋಧಕ ಸಹಚಾರರ ಸಣ್ಣಗುಂಪಿನೊಂದಿಗೆ ರೋಮನ್ನರ ಜಗತ್ತನ್ನು ಸಂಚರಿಸಿದನು.

ಈ ವಾರದ ಅಧ್ಯಯನ ಸಮಯದಲ್ಲಿ ಸಣ್ಣಗುಂಪುಗಳಿಗೆ ಸತ್ಯವೇದದ ಆಧಾರವನ್ನು ನೀಡಲು ನಮ್ಮ ಗಮನವನ್ನು ಕೇಂದ್ರೀಕರಿಸುತ್ತೇವೆ.

**ಭಾನುವಾರ** **ಆಗಸ್ಟ್, 30**

## ಸಣ್ಣ ಗುಂಪುಗಳು : ಮೊದಲು ದೇವರ ಕಲ್ಪನೆಯಾಗಿತ್ತು

ಆದಿಕಾಂಡ 1:1,2,26; ಇಬ್ರಿಯ 1:12; ಮತ್ತು ಎಫೆಸ 3:8,9 ಓದಿರಿ. ಈ ವಚನಗಳು ದೈವತ್ವದ ಏಕತೆಯನ್ನು ಹೇಗೆ ಬಹಿರಂಗಪಡಿಸುತ್ತವೆ?

ತಂದೆ, ಮಗ ಮತ್ತು ಪವಿತ್ರಾತ್ಮನು ಸೃಷ್ಟಿಯಲ್ಲಿ ಒಟ್ಟಾಗಿ ಭಾಗವಹಿಸಿದರು. ಅವರು ವಿಭಿನ್ನವಾದ ಮಾಡತಕ್ಕ ಕಾರ್ಯಗಳನ್ನು ಹೊಂದಿದ್ದರು. ಆದರೆ ವಿಭಾಗಿಸಲಾಗದ ಸಂಯೋಗದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದರು. ತಂದೆಯು ಪರಿಣಿತ ವಿನ್ಯಾಸಗಾರನು, ಶ್ರೇಷ್ಠ ವಾಸ್ತುಶಿಲ್ಪಿಯು ಆಗಿದ್ದಾನೆ. ಪವಿತ್ರಾತ್ಮನ ಶಕ್ತಿಯೊಂದಿಗಿನ ಸಂಯೋಜನೆಯಾಗಿ ಸೃಷ್ಟಿಯಲ್ಲಿ ಸಕ್ರಿಯ ಪ್ರತಿನಿಧಿಯಂತೆ, ಆತನು ತನ್ನ ಯೋಜನೆಯನ್ನು ಯೇಸುವಿನ ಮೂಲಕ ನಿಭಾಯಿಸುತ್ತಾನೆ. ಅಂತಹ ಶಕ್ತಿಯುತ ಅದ್ಭುತ ಕ್ರಿಯೆ ನಮ್ಮ ಗ್ರಹಿಕೆಯನ್ನು ಮೀರಿದೆ. ಸೃಷ್ಟಿಸಲಾಗದ

ಈ ಪ್ರಪಂಚ ಮತ್ತು ಪ್ರಪಂಚದ ಸುವ್ಯವಸ್ಥಿತ ರಚನೆಯ ನಿಜಸ್ಥಿತಿಯನ್ನು ಮಾತ್ರವಲ್ಲದೆ ದೇವರು ಸ್ವತಃ ತಾನೇ ಎಲ್ಲವನ್ನೂ ಉಂಟುಮಾಡಿದ್ದಾನೆ ಎಂಬುದನ್ನು ನಾವು ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕಾಗಿದೆ (ರೋಮಾ 1:18–20 ನೋಡಿ).

ಸಣ್ಣ ಗುಂಪುಗಳು ಮೊದಲಿಗೆ ದೇವರ ಕಲ್ಪನೆಯಾಗಿತ್ತು. ದೇವರ ಅನೇಕ ನಿಗೂಢ ಅಂಶಗಳಿಗೆ ಸಂಬಂಧಿಸಿದಂತೆ ಸಾಮ್ಯಗಳನ್ನು ಬಳಸುವಾಗ ಒಬ್ಬರು ಜಾಗರೂಕರಾಗಿರಬೇಕು, ಒಂದೊಂದನ್ನು ಬಿಡಿಬಿಡಿಯಾಗಿ ಬಳಸೋಣ ಮತ್ತು ತಂದೆ, ಮಗ ಮತ್ತು ಪವಿತ್ರಾತ್ಮನು ರಕ್ಷಣೆಯ ಇತಿಹಾಸದಲ್ಲಿ ಮೊದಲಿಗೆ "ಸಣ್ಣ ಗುಂಪನ್ನು" ರಚಿಸಿದರೆಂದು ಹೇಳೋಣ. ಅವರು ಮಾನವ ಜನಾಂಗದ ಸೃಷ್ಟಿಯಲ್ಲಿ ಮತ್ತು ಬೀಳುವಿಕೆ ನಂತರ ಅದರ ವಿಮೋಚನೆಯಲ್ಲಿ, ಒಟ್ಟಾಗಿ ಭಾಗವಹಿಸಿದರು.

ಯೋಹಾನ 10:17,18 ಅನ್ನು ರೋಮಾ 8:11; ಮತ್ತು 1 ಕೊರಿಂಥ 15:15 ರೊಂದಿಗೆ ಹೋಲಿಸಿ ರಕ್ಷಣೆಯ ಯೋಜನೆಯಲ್ಲಿ ತಂದೆ, ಮಗ ಮತ್ತು ಪವಿತ್ರಾತ್ಮನ ಐಕ್ಯತೆಯನ್ನು ಕ್ರಿಸ್ತನ ಪುನರುತ್ಥಾನವು ಹೇಗೆ ತೋರಿಸುತ್ತದೆ?

ಮಾನವ ಜನಾಂಗವನ್ನು ವಿಮೋಚಿಸುವ ಸ್ಪಷ್ಟ ಉದ್ದೇಶದೊಂದಿಗೆ ತಂದೆ, ಮಗ ಮತ್ತು ಪವಿತ್ರಾತ್ಮನು "ಸಣ್ಣ ಗುಂಪಿನಲ್ಲಿ" ಕೂಡಿಕೊಳ್ಳುತ್ತಾರೆ. "ರಕ್ಷಣಾ ಯೋಜನೆಯು ಬಹುಕಾಲದಿಂದ ಅಸಂಖ್ಯಾತರ ಸಮಾಲೋಚನೆಯಲ್ಲಿ ಅದರ ಸ್ಥಾನವನ್ನು ಹೊಂದಿದೆ" – ಎಲೆನ್ ಜಿ ವೈಟ್, ಫಂಡಮೆಂಟಲ್ ಆಫ್ ಕ್ರಿಶ್ಚಿಯನ್ ಎಜ್ಯುಕೇಷನ್, ಪುಟ 186. ಸಾಧ್ಯವಾದಷ್ಟು ಜನರನ್ನು ರಕ್ಷಿಸುವುದಕ್ಕಿಂತ ದೇವರಿಗೆ ಹೆಚ್ಚು ಪ್ರಾಮುಖ್ಯವಾದದು ಏನೂ ಇಲ್ಲ (1 ತಿಮೊಥೆ 2:4; 2 ಪೇತ್ರ 3:9). ಸಣ್ಣಗುಂಪುಗಳು ಅನೇಕ ಉದ್ದೇಶಗಳನ್ನು ಹೊಂದಿರಬಹುದು, ನಾವು ಈ ವಾರದ ಪಾಠದಲ್ಲಿ ಅವರ ಬಗ್ಗೆ ಅಧ್ಯಯನ ಮಾಡುತ್ತೇವೆ. ಆದರೆ ಕಳೆದು ಹೋದ ಜನರನ್ನು ಯೇಸುವಿಗಾಗಿ ಗೆಲ್ಲುವುದರ ಕಡೆಗೆ ಗಮನಹರಿಸುವುದು ಅದರ ಅತಿಕ್ರಮಣದ ಉದ್ದೇಶವಾಗಿದೆ. ಆದಕಾರಣ, ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವುದರಿಂದ, ನಾವು ಸ್ವತಃ ನಮಗೆ ಮಾತ್ರವಲ್ಲದೆ ಇತರರಿಗೂ ಸಹ ಸಹಾಯ ಮಾಡಬಹುದು. ಅಂತೆಯೇ, ನಮ್ಮ ಸಣ್ಣ ಗುಂಪುಗಳ ಅಂತಿಮ ಗುರಿ ಆತ್ಮವನ್ನು ಗೆಲ್ಲುವಂತದ್ದಾಗಿರಬೇಕು.

ನಮ್ಮ ದೇವರ ಐಕ್ಯತೆಯ ರಹಸ್ಯದ ಮೇಲೆ ವಾಸಿಸೋಣ. ಅದನ್ನು ಗ್ರಹಿಸುವುದು ಕಷ್ಟ ಅಲ್ಲವೇ? ಆದರೂ ನಾವು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರದ ವಿಷಯದ ಬಗ್ಗೆ ನಾವು ಇನ್ನೂ ನಂಬಿಕೆಯಲ್ಲಿರುವುದು ಮತ್ತು ಭರವಸೆ ಇಡುವುದು ಸರಿಯೇ? ನಂಬಿಕೆಯ ವಿಷಯಕ್ಕೆ ಬಂದಾಗ ಕ್ರೈಸ್ತರಿಗೆ ಇದು ಏಕೆ ಅಂತಹ ಪ್ರಮುಖ ತತ್ವವಾಗಿದೆ?

**ಸೋಮವಾರ** **ಆಗಸ್ಟ್ 31**

## ಸತ್ಯವೇದದಲ್ಲಿ ಸಣ್ಣ ಗುಂಪುಗಳು

ಸಣ್ಣ ಗುಂಪುಗಳು ಪ್ರಾರ್ಥನೆ, ಒಡನಾಟ, ಪರಸ್ಪರ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದು ಮತ್ತು ಕ್ರಿಸ್ತನಿಗಾಗಿ ಒಟ್ಟಾಗಿ ದುಡಿಯುವುದು ಮುಂತಾದ ಅನೇಕ ಉದಾಹರಣೆಗಳನ್ನು ಸತ್ಯವೇದ ಒದಗಿಸುತ್ತದೆ. ದೇವರ ಜನರು ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಮತ್ತು ತಮ್ಮ ವಿವಿಧ ತಲಾಂತುಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಅವಕಾಶವನ್ನು ಈ ಗುಂಪುಗಳು ಒದಗಿಸುತ್ತವೆ. ಅಂದರೆ ದೇವರು ನಮ್ಮಲ್ಲಿ ಪ್ರತಿಯೊಬ್ಬರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಈ ಸಣ್ಣಗುಂಪುಗಳು ಅವಕಾಶ ಒದಗಿಸುತ್ತದೆ.

ವಿಮೋಚನಕಾಂಡ 18:21–25 ಓದಿರಿ. ಮೋಶೆಯ ಮಾವನಾದ ಇತ್ರೋವನು ನೀಡಿದ ದೈವಿಕ ಸಲಹೆಯ ಮೋಶೆಯಲ್ಲಿ ಯಾವ ಗಮನಾರ್ಹ ವ್ಯತ್ಯಾಸವನ್ನುಂಟು ಮಾಡಿತು? ಈ ಯೋಜನೆ ಏಕೆ ಬಹಳ ಮುಖ್ಯವಾಗಿತ್ತು?

ಇಸ್ರಾಯೇಲ್ಯರ ಶಿಬಿರದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯು ದೇವಭಕ್ತ ಅಧಿಕಾರಿಯ ನೇತೃತ್ವದಲ್ಲಿ ಹತ್ತು ಜನರ ಗುಂಪಿನ ಭಾಗವಾಗಿದ್ದರು. ಈ ಸಣ್ಣ ಗುಂಪುಗಳು ಸಮಸ್ಯೆಯನ್ನು ಬಗೆಹರಿಸುವ ಸ್ಥಳವಾಗಿತ್ತು, ಆದರೆ ಅವುಗಳು ಸಹ ಹೆಚ್ಚಾಗಿದ್ದವು. ಅವುಗಳು ಸಹಭಾಗಿತ್ವದ ಸ್ಥಳಗಳಾಗಿತ್ತು, ಅಲ್ಲಿ ಸಮಸ್ಯೆಗಳನ್ನು ತಡೆಹಿಡಿಯಲಾಯಿತು ಮತ್ತು ಅಧ್ಯಾತ್ಮಿಕ ಜೀವನವನ್ನು ಪೋಷಿಸಲಾಯಿತು. ಅವು ದರ್ಶನದ ಸ್ಥಳಗಳಾದವು. ಅಲ್ಲಿ ಇಸ್ರಾಯೇಲ್ಯರಿಗಾಗಿ ಇರುವ ದೇವರ ಯೋಜನೆಯನ್ನು ಹಂಚಿಕೊಳ್ಳಬಹುದಾಗಿತ್ತು. ಈ ರೀತಿಯ ಗುಂಪುಗಳಲ್ಲಿ, ಜನರು ಗಟ್ಟಿಯಾದ ಮತ್ತು ಕಾಳಜಿಯುಳ್ಳ ಸಂಬಂಧಗಳನ್ನು ರೂಪಿಸಿಕೊಳ್ಳಬಹುದಿತ್ತು, ಅವರು

ಎದುರಿಸುತ್ತಿರುವ ಯಾವುದೇ ಸಮಸ್ಯೆಗಳಿಗೆ ಎಲ್ಲರೂ ಒಟ್ಟಾಗಿ ಭಾಗವಹಿಸುವ ಮೂಲಕ ಸಹಾಯ ಮಾಡಬಹುದಿತ್ತು. ಅಂದು ಮತ್ತು ಇಂದು, ಜನರು ಪ್ರಯಾಸಪಡುತ್ತಿರುವ ವಿಷಯಗಳೊಂದಿಗೆ ಇತರ ಜನರು ಅವರಿಗೆ ಸಹಾಯ ಮಾಡಬಹುದು ಎಂಬುದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ಸಣ್ಣಗುಂಪುಗಳು ಸ್ನೇಹಪರ, ಕಾಳಜಿಯುಳ್ಳ ಒಡನಾಟ, ಅಧ್ಯಾತ್ಮಿಕ ಬೆಳವಣಿಗೆ ಮತ್ತು ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಅವಕಾಶಗಳನ್ನು ಒದಗಿಸುತ್ತದೆ. ಗುಂಪುಸಂವಹನಕ್ಕಾಗಿ ಸೂಕ್ತವಾದ ಗಾತ್ರವು ಆರು ಮತ್ತು ಹನ್ನೆರಡು ಜನರ ನಡುವೆ ಇರುತ್ತದೆ. ಸಣ್ಣಗುಂಪಿನ ತಜ್ಞರು ನಮಗೆ ಹೇಳುವುದು ಆಕರ್ಷಕವಾಗಿದೆ. ಮೋಶೆ ಮತ್ತು ಯೇಸು ಇಬ್ಬರೂ ಈ ಗುಂಪುಗಳನ್ನು ರಚಿಸುವಾಗ ಈ ನಿಖರವಾದ ಗಾತ್ರವನ್ನು ಬಳಸಿಕೊಂಡಿದ್ದಾರೆ.

ಲೂಕ 6:12,13; ಮತ್ತಾಯ 10:1; ಮತ್ತು ಮಾರ್ಕ 3:13–15 ಓದಿರಿ. ಶಿಷ್ಯರನ್ನು ಕರೆಯುವುದರಲ್ಲಿ ಮತ್ತು ತನ್ನ ಸಣ್ಣ ಗುಂಪಿನ ಸೇವೆಯ ಭಾಗವಾಗಲು ಅವರನ್ನು ಆರಿಸಿಕೊಳ್ಳುವುದರಲ್ಲಿ ಯೇಸುವಿನ ಎರಡರಷ್ಟು ಉದ್ದೇಶವೇನು?

ಯೇಸು ಶಿಷ್ಯರನ್ನು ಕರೆಯುತ್ತಿರುವ ಉದ್ದೇಶವೇನೆಂದರೆ ಅವರು ತಮ್ಮ ಧರ್ಮಪ್ರಚಾರ ಕಾರ್ಯವನ್ನು ಜಗತ್ತಿಗೆ ಸಾರಲು ಅವರನ್ನು ಆಧ್ಯಾತ್ಮಿಕವಾಗಿಯೂ ಮತ್ತು ಪ್ರಾಯೋಗಿಕವಾಗಿಯೂ ಸಿದ್ಧಪಡಿಸುವುದೇ ಆಗಿತ್ತು. ಆತನೊಂದಿಗಿನ ಒಡನಾಟದಲ್ಲಿ, ಅವರು ಕೃಪೆಯಲ್ಲಿ ಬೆಳೆದರು. ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಸೇವೆ ಸಲ್ಲಿಸಬೇಕೆಂದು ಅವರು ತಮ್ಮ ಸಣ್ಣಗುಂಪು ಕೂಟಗಳ ಸಂದರ್ಭದಲ್ಲಿ ಕಲಿತರು. ದಿನದಿಂದ ದಿನಕ್ಕೆ, ಯೇಸು ತನ್ನ ಸುತ್ತಲಿರುವ ಜನರ ಅಗತ್ಯಗಳಿಗಾಗಿ ಸೇವೆ ಸಲ್ಲಿಸುತ್ತಿರುವುದನ್ನು ಅವರು ಗಮನಿಸಿದಾಗ, ಅವರು ತಮ್ಮ ತಲಾಂತುಗಳನ್ನು ಹೇಗೆ ಬಳಸಿಕೊಳ್ಳಬೇಕೆಂದು ಗಮನಿಸುವ ಮೂಲಕ ಕಲಿತುಕೊಂಡರು. ಆಧ್ಯಾತ್ಮಿಕ ಪೋಷಣೆ ಮತ್ತು ಔಟ್‌ರೀಚ್‌ಗಳೆರಡು (ಮೀರಿ ಹೋಗುವುದು) ಯೇಸುವಿನ ಸಣ್ಣ ಗುಂಪಿನ ಉದ್ದೇಶವಾಗಿತ್ತು.

ನೀವು ಒಂದು ಸಣ್ಣ ಗುಂಪಿನ ಜನರೊಂದಿಗೆ ಭಾಗಿಯಾಗಿದ್ದ ಸಮಯದ ಬಗ್ಗೆ ಆಲೋಚಿಸಿ, ಯಾವುದೇ ಸಂದರ್ಭಗಳೇ ಇರಲಿ, ಒಬ್ಬರಿಗೊಬ್ಬರು

ಕಾಳಜಿವಹಿಸುವರು ಮತ್ತು ಸಾಮಾನ್ಯ ಗುರಿಗಾಗಿ ಕೆಲಸ ಮಾಡುತ್ತಿರುವರು. ನಮ್ಮ ನಂಬಿಕೆಯ ಸಂದರ್ಭದಲ್ಲಿ ಯಾವುದು ಸಣ್ಣಗುಂಪುಗಳ ಮೌಲ್ಯವನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡಿತೋ, ಅದರಿಂದ ನೀವು ಏನನ್ನು ಕಲಿತಿದ್ದೀರಿ?

**ಮಂಗಳವಾರ** **ಸೆಪ್ಟೆಂಬರ್ 1**

## ಸೇವೆಗಾಗಿ ಆಯೋಜಿಸಲಾಗಿದೆ

1 ಕೊರಿಂಥ 12:12–25 ಓದಿರಿ. ಸಾಮರಸ್ಯದಿಂದ ಒಟ್ಟಿಗೆ ಕೆಲಸ ಮಾಡುವ ಒಂದು ಅತ್ಯುತ್ತಮ ದೃಷ್ಟಾಂತವನ್ನು ಮಾನವನ ದೇಹವು ಹೇಗೆ ಒದಗಿಸುತ್ತದೆ?

ಪೌಲನು ಸಭೆಯ ಜೀವನದಲ್ಲಿ ಆಧ್ಯಾತ್ಮಿಕ ವರಗಳ ಮಹತ್ವವನ್ನು ಪ್ರಕಟಪಡಿಸುವುದಲ್ಲದೆ, ಅವುಗಳನ್ನು ಹೇಗೆ ಆಯೋಜಿಸಬಹುದು ಎಂಬುದರ ಮಾದರಿಯನ್ನು ಸಹ ಅವನು ಪ್ರಸ್ತಾಪಿಸಿದ್ದಾನೆ. ಅವನು ಆಧ್ಯಾತ್ಮಿಕ ವರಗಳನ್ನು ಕ್ರಿಸ್ತನ ದೇಹದ ಸನ್ನಿವೇಶದಲ್ಲಿ ಮತ್ತು ಅದು ಹೇಗೆ ಕೆಲಸ ಮಾಡಬಹುದೆಂದು ಚರ್ಚಿಸಿದ್ದಾನೆ.

ಅಂಗರಚನಾ ಶಾಸ್ತ್ರ ಮತ್ತು ಶರೀರಶಾಸ್ತ್ರದ ಅಧ್ಯಯನವು ದೇಹದ ಅಂಗಗಳನ್ನು ವಿವಿಧ ಅನ್ಯೋನ್ಯ ಸಂಬಂಧದ ವ್ಯವಸ್ಥೆಗಳಾಗಿ ಸಂಘಟಿಸಲಾಗಿದೆ ಎಂದು ಪ್ರಕಟಿಸುತ್ತದೆ. ಉದಾಹರಣೆಗೆ, ಜೀರ್ಣಾಂಗ, ಹೃದಯ ನಾಳ, ಶ್ವಾಸಕೋಶ, ಅಸ್ತಿಪಂಜರವು ದೇಹದ ಕೆಲವು ಸಂಕೀರ್ಣ ಅಂಗ ವ್ಯವಸ್ಥೆಗಳಾಗಿದೆ. ಆತ್ಮೀಕ ವರಗಳು ದೇಹದ ವಿವಿಧ ಭಾಗಗಳಂತಿದೆ. ಅವುಗಳನ್ನು ವ್ಯವಸ್ಥೆಗಳನ್ನಾಗಿ ಅಥವಾ ಗುಂಪುಗಳನ್ನಾಗಿ ಸಂಘಟಿಸಿದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. ವಾಸ್ತವವಾಗಿ ಅನೇಕ ಸಂದರ್ಭಗಳಲ್ಲಿ ಅವು ಒಂಟಿಯಾಗಿ ಕಾರ್ಯನಿರ್ವಹಿಸಲಾರವು. ಅವುಗಳು ಏನೇ ಮಾಡಿದರು ಮುಕ್ತವಾಗಿ ಇರುವುದಕ್ಕೆ ನಮ್ಮ ದೇಹಗಳು ಕೇವಲ ಪ್ರತ್ಯೇಕ ಅಂಗಗಳ ಗಡ್ಡೆಯಲ್ಲ. ಪ್ರತಿಯೊಂದು ದೇಶದ ಕಾರ್ಯವನ್ನು ಬಿಗಿಯಾಗಿ ಒಂದು ಗೂಡಿಸಿದ ವ್ಯವಸ್ಥೆಯಾಗಿ ಆಯೋಜಿಸಲಾಗಿದೆ, ಅದು ಒಂದು ಸಾಮಾನ್ಯ ಗುರಿಯತ್ತ ಒಟ್ಟಾಗಿ ಕಾರ್ಯನಿರ್ವಹಿಸುತ್ತದೆ.

ನಮ್ಮ ಆಧ್ಯಾತ್ಮಿಕ ವರಗಳನ್ನು ನಾವು ಉತ್ತಮವಾಗಿ ಬಳಸಿಕೊಳ್ಳಬಹುದಾದ ಪರಿಸರದ ಬಗ್ಗೆ ಇದೆಲ್ಲವೂ ನಮಗೆ ಹೇಳುತ್ತದೆ. ನಾವು ಒಂಟಿಯಾಗಿ ಕಾರ್ಯನಿರ್ವಹಿಸುವಾಗ ನಿರುತ್ಸಾಹಗೊಳ್ಳುವುದು ತುಂಬಾ ಸುಲಭ, ಆದರೆ ಒಂದೇ ರೀತಿಯ ಆಸಕ್ತಿ ಮತ್ತು ಗುರಿಗಳನ್ನು ಹೊಂದಿರುವ ಜನರ ಸಣ್ಣಗುಂಪಿನ ಭಾಗವಾಗಿದ್ದಾಗ, ನಮ್ಮ ಪ್ರಯತ್ನಗಳನ್ನು ಹೆಚ್ಚು ಉತ್ತಮವಾಗಿ ಏಕಾಗ್ರಗೊಳಿಸುತ್ತದೆ ಮತ್ತು ಹೆಚ್ಚು ವೃದ್ಧಿ ಮಾಡುತ್ತದೆ ಎಂದು ನಾವು ಕಂಡುಕೊಳ್ಳುತ್ತೇವೆ.

ಸಣ್ಣಗುಂಪುಗಳು ನಮ್ಮ ಆಧ್ಯಾತ್ಮಿಕ ವರಗಳನ್ನು ಅಭ್ಯಾಸಿಸುವುದಕ್ಕೆ ಉತ್ತಮ ವಾತಾವರಣವನ್ನು ಒದಗಿಸುತ್ತದೆ ಮತ್ತು ಸ್ಥಳೀಯ ಸಭಾಸಮೂಹದೊಂದಿಗೆ ಹೊರಗೆ ತಲುಪುವ ಧರ್ಮಪ್ರಚಾರ ಸೇವೆಯ ಹೃದಯವಾಗಬಹುದು.

ಎಲೆನ್ ಜಿ ವೈಟ್‌ರವರು ಈ ಮಾತುಗಳಲ್ಲಿ ಸಣ್ಣಗುಂಪುಗಳ ಮೌಲ್ಯವನ್ನು ಒತ್ತಿ ಹೇಳುತ್ತಾರೆ: "ಕ್ರೈಸ್ತರ ಪ್ರಯತ್ನದ ಆಧಾರದ ಮೇಲೆ ಸಣ್ಣಕಂಪನಿಗಳು ರೂಪುಗೊಂಡಿವೆ ಎಂದು ತಪ್ಪಾಗಿ ಹೇಳುವುದಕ್ಕೆ ಸಾಧ್ಯವಿಲ್ಲದ ಒಬ್ಬ ವ್ಯಕ್ತಿಯಿಂದ ನನಗೆ ಪ್ರಸ್ತುತಪಡಿಸಲಾಯಿತು. ಸಭೆಯಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದ ಪಕ್ಷದಲ್ಲಿ, ಸಭಾಸದಸ್ಯರು ಸಣ್ಣಕಂಪನಿಗಳಾಗಿ ರೂಪುಗೊಳ್ಳಬೇಕು, ಕೇವಲ ಸಭಾಸದಸ್ಯರಿಗಾಗಿ ಮಾತ್ರವಲ್ಲ, ಆದರೆ ಕೆಲಸ ಮಾಡುವುದಕ್ಕೆ ರೂಪುಗೊಳ್ಳಬೇಕಾಗಿದೆ. ಒಂದು ಸ್ಥಳದಲ್ಲಿ ಇಬ್ಬರೂ ಅಥವಾ ಮೂವರು ಮಾತ್ರ ಸತ್ಯವನ್ನು ಅರಿತುಕೊಂಡವರಾಗಿದ್ದರೆ ಅವರೇ ಸ್ವತಃ ಒಂದು ಕೆಲಸಗಾರರ ತಂಡವನ್ನು ರೂಪಿಸಲಿ ಅವರು ತಮ್ಮ ಒಕ್ಕೂಟದ ಸಂಕೋಲೆಯನ್ನು ಮುರಿಯಲಾಗದ ಹಾಗೇ ಕಾಪಾಡಿಕೊಳ್ಳಬೇಕು, ಪ್ರೀತಿ ಮತ್ತು ಐಕ್ಯತೆಯಲ್ಲಿ ಒಟ್ಟಾಗಿ ಹಿಡಿದುಕೊಳ್ಳಬೇಕು, ಪರಸ್ಪರ ಒಬ್ಬರನ್ನೊಬ್ಬರು ಮುಂದುವರಿಯುವುದಕ್ಕೆ ಪ್ರೋತ್ಸಾಹಿಸಬೇಕು, ಪ್ರತಿಯೊಬ್ಬರು ಇತರರ ಸಹಕಾರದಿಂದ ಧೈರ್ಯ ಮತ್ತು ಶಕ್ತಿಯನ್ನು ಪಡೆದುಕೊಳ್ಳುತ್ತಾರೆ"– ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 7, ಪುಟಗಳು 21, 22.

ಪ್ರತಿಯೊಬ್ಬ ಸಭಾಸದಸ್ಯರು ಆಧ್ಯಾತ್ಮಿಕವಾಗಿ ಬೆಳೆಯಲು, ಪ್ರೇಮದ ಒಡನಾಟವನ್ನು ಅನುಭವಿಸಲು ಮತ್ತು ದೇವರ ಅವರಿಗೆ ನೀಡಿರುವ ವರಗಳನ್ನು

ಸೇವಾಕಾರ್ಯದಲ್ಲಿ ಬಳಸಿಕೊಳ್ಳುವುದಕ್ಕಾಗಿ ದೇವರು ಸಣ್ಣ ಗುಂಪು ಸೇವೆಯನ್ನು ಅಭಿಷೇಕಿಸಿದ್ದಾನೆ.

ಎಲೆನ್ ಜಿ ವೈಟ್‌ರವರ ಮೇಲಿನ ಹೇಳಿಕೆಯನ್ನು ಪ್ರತಿಬಿಂಬಿಸಿ ಅದನ್ನು ವಾಕ್ಯಾಂಗ ಭಾಗದಿಂದ ವಾಕ್ಯಾಂಗ ಭಾಗವಾಗಿ ವಿಶ್ಲೇಷಿಸಿ. ನಿಮ್ಮ ಸಭೆಯಲ್ಲಿ ಈ ದೈವೀಕ ಸಲಹೆಯನ್ನು ಹೇಗೆ ಕಾರ್ಯಗತಗೊಳಿಸಬಹುದು?

**ಬುಧವಾರ** **ಸೆಪ್ಟೆಂಬರ್ 2**

## ಹೊಸ ಒಡಂಬಡಿಕೆ ಸಣ್ಣಗುಂಪುಗಳು

ಹೊಸ ಒಡಂಬಡಿಕೆಯ ಸಭೆಯು ಬೆಳವಣಿಗೆಯಲ್ಲಿ ವೃದ್ಧಿಸಲ್ಪಟ್ಟಿತು. ಕೆಲವೇ ವರ್ಷಗಳಲ್ಲಿ ಅದು ವಿಶ್ವಾಸಿಗಳ ಸಣ್ಣಗುಂಪಿನಿಂದ ಸಾವಿರಾರು ಆರಾಧಕರ ಗುಂಪಾಗಿ ಬೆಳೆಯಿತು. ವಿಶ್ವಾಸಿಗಳ ಒಳಹರಿವಿಗೂ ಮತ್ತು ತ್ವರಿತ ಬೆಳವಣಿಗೆಯ ಚಮತ್ಕಾರಕ್ಕೂ ಕಾರಣವಾದ ಅನೇಕ ಅಂಶಗಳಿವೆ. ಯೇಸುವಿನ ಸೇವೆಯು ಬೀಜವನ್ನು ಬಿತ್ತಿತ್ತು ಮತ್ತು ಶಿಷ್ಯರ ಸುವಾರ್ತಾ ಸಂದೇಶವನ್ನು ಅಂಗೀಕರಿಸಿಕೊಳ್ಳುವುದಕ್ಕೆ ಅಸಂಖ್ಯಾತ ಜನರನ್ನು ಸಿದ್ಧಪಡಿಸಲಾಯಿತು. ಯೇಸುವಿನ ಆರೋಹಣದ ನಂತರ, ಪೆಂತಕೋಸ್ತಿನ ದಿನದಂದು ನಂಬಿಕೆಯಿಂದ ಪ್ರಾರ್ಥಿಸುತ್ತಿದ್ದ ಶಿಷ್ಯರ ಮೇಲೆ ಪವಿತ್ರಾತ್ಮನು ಅಗಾಧವಾಗಿ ಇಳಿದು ಬಂದನು. ಹೊಸ ಒಡಂಬಡಿಕೆ ಸಭೆಯ ಕ್ಷಿಪ್ರ ಬೆಳವಣಿಗೆಗೆ ಕಾರಣವಾದ ಅಂಶವೆಂದರೆ ಅದರ ಸಣ್ಣಗುಂಪಿನ ಸಾಂಘಿಕ ರಚನೆಯಾಗಿದೆ. ಸಣ್ಣಗುಂಪುಗಳು ವ್ಯತ್ಯಾಸವನ್ನು ಉಂಟುಮಾಡಿದೆ.

ಅಪೊಸ್ತಲರ 18:1–5 ಮತ್ತು ಅಪೊಸ್ತಲರ 20:1–4 ಓದಿರಿ. ಪೌಲನೊಂದಿಗೆ ನಿಕಟವಾಗಿ ಕೆಲಸ ಮಾಡಿದವರ ಹೆಸರನ್ನು ಲೂಕನು ಪಟ್ಟಿಮಾಡಿದನೆಂದು ನೀವು ಏಕೆ ಯೋಚಿಸುತ್ತೀರಿ?

ಪೌಲನ ಜೊತೆಗೆ ಕೆಲಸ ಮಾಡಿದವರ ಕೆಲವು ಹೆಸರುಗಳನ್ನು ಲೂಕನು ಉಲ್ಲೇಖಿಸುತ್ತಿರುವದನ್ನು ಗಮನಿಸುವುದು ಆಕರ್ಷಕವಾಗಿದೆ. ಅವನಿಗೆ ಪ್ರತಿಯೊಬ್ಬರು ಮುಖ್ಯವಾಗಿದ್ದರು. ಅವನಿಗೆ ಅವರ ಹೆಸರು ತಿಳಿದಿತ್ತು. ಅವರು ತಮ್ಮ ಹೊರಗಿನ ಸುವಾರ್ತಾ ಸೇವೆಯಲ್ಲಿ ಪರಸ್ಪರ ಒಬ್ಬರಿಗೊಬ್ಬರು

ಬೆಂಬಲವಾಗಿದ್ದರು. ಅವನು ಪ್ರಸ್ತಾಪಿಸಿದ ಹೆಸರುಗಳು ಕೆಲವೇ ಆಗಿದ್ದಾಗ್ಯೂ, ಸಣ್ಣ ಸಂಖ್ಯೆಗಳಲ್ಲಿಯೂ ಸಹ ಪರಸ್ಪರ ನಿಕಟವಾಗಿ ಕೆಲಸ ಮಾಡುವ ಮಹತ್ವದ ಬಗ್ಗೆ ಸಾಬೀತುಪಡಿಸಲು ಇದು ಸಹಾಯ ಮಾಡುತ್ತದೆ.

ಈ ಜನರಲ್ಲಿ ಪ್ರತಿಯೊಬ್ಬರು ಖಂಡಿತವಾಗಿಯೂ ವರಗಳನ್ನು ಹೊಂದಿದ್ದರು, ಅದು ಇತರರು ಪಡೆದುಕೊಂಡಿದ್ದಕ್ಕಿಂತ ವಿಭಿನ್ನವಾಗಿತ್ತು. ಅವರು ವಿವಿಧ ಹಿನ್ನೆಲೆ ಮತ್ತು ಸಂಸ್ಕೃತಿಗಳಿಂದ ಬಂದಿದ್ದರು. ಅವರು ವಿಷಯಗಳನ್ನು ನೋಡುವ ವಿಧಾನವು ಯಾವಾಗಲೂ ಒಂದೇ ಆಗಿರಲಿಲ್ಲ, ಆದರೆ ಪ್ರತಿಯೊಬ್ಬರೂ ಕ್ರಿಸ್ತನ ಉದ್ದೇಶವನ್ನು ಮಾಡುವುದಕ್ಕಾಗಿ, ಅಮೂಲ್ಯವಾದ ಕೊಡುಗೆಗಳನ್ನು ಹೊಂದಿದ್ದರು. ಅವರ ವರಗಳ ವೈವಿಧ್ಯತೆಗಳು, ಹಿನ್ನೆಲೆಗಳು, ಮತ್ತು ಅನುಭವಗಳು ಸಭೆಯ ಬೆಳವಣಿಗೆಗೆ ಕಾರಣವಾಗಿದೆ. ಪ್ರತಿಯೊಬ್ಬರು ತಮ್ಮದೇ ಆದ ಹಿನ್ನೆಲೆಯ ಶ್ರೀಮಂತಿಕೆಯಿಂದ ಮತ್ತು ಯೇಸುವಿನೊಂದಿಗಿನ ವೈಯಕ್ತಿಕ ಅನುಭವದಿಂದ ಕ್ರಿಸ್ತನ ಸೇವೆಗಾಗಿ ಕೊಡುಗೆ ನೀಡಿದ್ದಾರೆ.

ಅಪೋಸ್ತಲರ 16:11–15,40; ಮತ್ತು ಅಪೊಸ್ತಲರ 12:11,12 ಹೋಲಿಸಿ. ಮನಸಾಂತರ ಹೊಂದಿದ ಕೂಡಲೇ ಲುದ್ಯಳು ಪೌಲನಿಗೆ ಯಾವ ಆಹ್ವಾನವನ್ನು ಕೊಟ್ಟಳು? ಜೈಲಿನಿಂದ ಬಿಡುಗಡೆಯಾದ ನಂತರ ಪೌಲ ಮತ್ತು ಪೇತ್ರರಿಬ್ಬರೂ ಎಲ್ಲಿಗೆ ಹೋದರು?

ಹೊಸ ಒಡಂಬಡಿಕೆಯ ವಿಶ್ವಾಸಿಗಳು ಮನೆಗಳಲ್ಲಿ ನಿಯಮಿತವಾಗಿ ಭೇಟಿಯಾಗುತ್ತಿದ್ದರು. ಕ್ರೈಸ್ತರ ಮನೆಗಳು ಪ್ರಭಾವ ಬೀರುವ ಕೇಂದ್ರ ಮತ್ತು ಸಣ್ಣಗುಂಪು ಸೇವೆಯ ಹೃದಯವಾಯಿತು.

ನಿಮ್ಮ ಮನೆಯಲ್ಲಿ ಸಣ್ಣಗುಂಪು ಸೇವೆಯನ್ನು ಪ್ರಾರಂಭಿಸುವ ಬಗ್ಗೆ ಅಥವಾ ಒಬ್ಬ ಸ್ನೇಹಿತನ ಜೊತೆಗೆ ಸೇರಿಕೊಂಡು ಆ ವ್ಯಕ್ತಿಯ ಮನೆಯಲ್ಲಿ ಸಣ್ಣಗುಂಪು ಸೇವೆಯನ್ನು ಆರಂಭಿಸುವುದಕ್ಕೆ ನೀವು ಯೋಚಿಸಿದ್ದೀರಾ? ಈಗಾಗಲೇ ನೀವು ಸಣ್ಣಗುಂಪು ಸೇವೆಯ ಭಾಗವಾಗಿದ್ದರೆ, ಅದರ ಪ್ರಯೋಜನಗಳ ಕುರಿತು ನಿಮ್ಮ ಸಬ್ಬತ್ ಶಾಲಾ ತರಗತಿಯೊಂದಿಗೆ ಈ ವಾರ ಏನನ್ನು ಹಂಚಿಕೊಳ್ಳಬಹುದೆಂದು ನೀವು ಯೋಚಿಸುವಿರಿ.

**ಗುರುವಾರ** **ಸೆಪ್ಟೆಂಬರ್ 3**

## ಸಣ್ಣಗುಂಪಿನ ನೈತಿಕಶಕ್ತಿ

ಸಣ್ಣಗುಂಪುಗಳು ದೇವರು ತನ್ನ ಸಭೆಯ ಬೆಳವಣಿಗೆಗೆ ಉಪಯೋಗಿಸುವ ವಾಹನವಾಗಿದೆ. ಜನರು ತಮ್ಮ ತೊಂದರೆಗಳನ್ನು ಮತ್ತು ಪರಸ್ಪರ ಕಾಳಜಿಗಳನ್ನು ವ್ಯಕ್ತಪಡಿಸುವ "ಸುರಕ್ಷಿತ ತಾಣಗಳು" ಇವಾಗಿವೆ. ಕಾಳಜಿ ವಹಿಸುವ ಸಂಬಂಧಗಳ ಸನ್ನಿವೇಶದಲ್ಲಿ ಅವು ಆಧ್ಯಾತ್ಮಿಕ ಬೆಳವಣಿಗೆಗೆ ಅವಕಾಶಗಳನ್ನು ಒದಗಿಸುತ್ತದೆ. ಅನೇಕ ಕ್ರೈಸ್ತರಲ್ಲದವರು ವೊದಲ ಬಾರಿಗೆ ಸಾಂಪ್ರದಾಯಿಕ ಸಭಾ ಸೇವಾಕಾರ್ಯದಲ್ಲಿ ಪಾಲ್ಗೊಳ್ಳುವುದಕ್ಕಿಂತ ಹೆಚ್ಚಾಗಿ ಮನೆಯಲ್ಲಿ ನಡೆಸುವ ಸಣ್ಣಗುಂಪಿನ ಕೂಟಗಳಲ್ಲಿ ಭಾಗವಹಿಸುವುದರಲ್ಲಿ ಹೆಚ್ಚು ಆರಾಮದಾಯಕವೆಂದು ಭಾವಿಸುತ್ತಾರೆ.

ಅಪೊ 4:31; ಅಪೊ 12:12 ಮತ್ತು ಅಪೋ 20:17–19; 27–32 ಓದಿರಿ. ಈ ಹೊಸ ಒಡಂಬಡಿಕೆಯ ಗುಂಪುಗಳಲ್ಲಿನ ಎಲ್ಲಾ ವಿವಿಧ ಅಂಶಗಳನ್ನು ಪಟ್ಟಿ ಮಾಡಿ. ಈ ಗುಂಪುಗಳು ಯಾವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವು?

ಮುಂಚಿನ ಕ್ರೈಸ್ತರು ಇತರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಲು, ಪರಸ್ಪರ ಕಾಳಜಿಯ ಬಗ್ಗೆ ಪ್ರಾರ್ಥಿಸಲು, ಆತ್ಮೀಯ ಒಡನಾಟವನ್ನು ಹಂಚಿಕೊಳ್ಳಲು, ದೇವರವಾಕ್ಯವನ್ನು ಅಧ್ಯಯನ ಮಾಡಲು, ಸೇವೆಗೋಸ್ಕರ ಸಜ್ಜುಗೊಳ್ಳಲು, ಸುಳ್ಳು ಶಿಕ್ಷಕರ ವಿರುದ್ಧ ಒಬ್ಬರನ್ನೊಬ್ಬರು ರಕ್ಷಿಸಿಕೊಳ್ಳಲು ಮತ್ತು ಹೊರಗಿನ ಸುವಾರ್ತಾ ಸೇವೆಯ ಚಟುವಟಿಕೆಗಳಲ್ಲಿ ಒಟ್ಟಾಗಿ ಭಾಗವಹಿಸಲು ಒಟ್ಟಿಗೆ ಭೇಟಿಯಾಗುತ್ತಿದ್ದರು.

ಸಣ್ಣಗುಂಪುಗಳು ವ್ಯತ್ಯಾಸವನ್ನುಂಟುವಮಾಡುತ್ತದೆ. ಜನರು ತಮ್ಮ ತಲಾಂತುಗಳನ್ನು ಒಟ್ಟುಗೂಡಿಸುವರು, ಹೊರಗಿನ ಸುವಾರ್ತೆ ಸೇವೆಗಾಗಿ ಪವಿತ್ರಾತ್ಮನ ಶಕ್ತಿಯ ಮೇಲೆ ಆತುಕೊಳ್ಳುತ್ತಾರೆ, ಇದು ದೇವರ ಹಸ್ತದಲ್ಲಿರುವ ಪ್ರಬಲ ಅಸ್ತ್ರವಾಗಿದೆ.

ಮತ್ತಾಯ 9:37,38 ಓದಿರಿ. ಸುಗ್ಗಿಯ ಬಗ್ಗೆ ಯೇಸು ಏನು ಹೇಳುತ್ತಾನೆ ಮತ್ತು ಸಮಸ್ಯೆಗೆ ಆತನ ಪರಿಹಾರವೇನು?

ಸುವಾರ್ತೆಯನ್ನು ಪ್ರಗತಿ ಪಡಿಸುವುದಕ್ಕಾಗಿ ಶಿಷ್ಯರು ಚುರುಕಿಲ್ಲದ ಸಾಧ್ಯತೆಗಳನ್ನು ಮಾತ್ರ ಕಂಡರು, ಆದರೆ ಯೇಸು ಉತ್ತಮ ಸಾಧ್ಯತೆಗಳನ್ನು ಕಂಡನು. ಆತನು ಬೆಳೆಯು ನಿಜವಾಗಿಯೂ ಬಹಳವಿದೆ ಎಂಬ ಒಳ್ಳೆಯ ಸುದ್ದಿಯನ್ನು ಅವರೊಂದಿಗೆ ಹಂಚಿಕೊಂಡ ನಂತರ "ಕೆಲಸಗಾರರು ಕಡಿಮೆ" ಎಂಬ ಸಮಸ್ಯೆಯನ್ನು ತೋರಿಸಿದನು. ಕ್ರಿಸ್ತನ ಪರಿಹಾರವೆಂದರೆ "ಸುಗ್ಗಿಯ ಕರ್ತನು ತನ್ನ ಬೆಳೆಯನ್ನು ಕೊಯ್ಯಲು ಕೆಲಸಗಾರರನ್ನು ಕಳುಹಿಸಿಕೊಡುವಂತೆ" ಪ್ರಾರ್ಥಿಸಬೇಕು (ಮತ್ತಾಯ 9:33). ಕ್ರಿಸ್ತನ ಪ್ರಾರ್ಥನೆಗೆ ಸಣ್ಣಗುಂಪುಗಳು ಉತ್ತಮವಾಗಿದೆ ಮತ್ತು ಕ್ರಿಸ್ತನ ಸುಗ್ಗಿಗಾಗಿ ಕೆಲಸಗಾರರ ಸಂಖ್ಯೆಯನ್ನು ಕ್ಷಿಪ್ರಗತಿಯಲ್ಲಿ ಹೆಚ್ಚು ಹೆಚ್ಚಾಗಿ ಹೆಚ್ಚಿಸುತ್ತದೆ.

ಎಲ್ಲಾ ಪರಿಣಾಮಕಾರಿ ಸಣ್ಣಗುಂಪುಗಳು ಸಾಕ್ಷಿ ಮತ್ತು ಸೇವೆಯ ಕಡೆಗೆ ಗಮನಹರಿಸುತ್ತದೆ. ಸಣ್ಣಗುಂಪಿನ ಸೇವೆಯು ಅಂತರಿಕವಾಗಿ ಗಮನವನ್ನು ಹರಿಸಿ ಮತ್ತು ಹೊರಗಿನ ಸೇವೆಗೆ ಗಮನವನ್ನು ಹರಿಸದಿದ್ದರೆ, ಬೇಗನೇ ನಶಿಸಿಹೋಗುತ್ತದೆ. ಸಣ್ಣಗುಂಪು ಸ್ವಂತ ಸೇವೆ ಮಾಡಿಕೊಳ್ಳುತ್ತಿದ್ದರೆ ಮತ್ತು ಚರ್ಚೆ ಗುಂಪಿಗಿಂತ ಸ್ವಲ್ಪ ಹೆಚ್ಚಾಗಿದ್ದರೆ ಅದು ಅದರ ಉದ್ದೇಶದಲ್ಲಿ ವಿಫಲವಾಗುತ್ತದೆ ಮತ್ತು ಅದರ ಅಸ್ತಿತ್ವದ ಪ್ರಮುಖ ಕಾರಣವನ್ನು ಕಳೆದುಕೊಳ್ಳುತ್ತದೆ. ಸಣ್ಣ ಗುಂಪುಗಳು ಜನರನ್ನು ಯೇಸುವಿನ ಬಳಿಗೆ ನಡೆಸಲು, ಯೇಸುವಿನಲ್ಲಿ ಅವರ ನಂಬಿಕೆಯನ್ನು ಪೋಷಿಸಲು ಮತ್ತು ಯೇಸುವಿಗಾಗಿ ಸಾಕ್ಷಿ ಹೇಳಲು ಅವರನ್ನು ಸಜ್ಜುಗೊಳಿಸುವುದಕ್ಕಾಗಿ ಉಂಟಾಗಿದೆ.

ನಿಮ್ಮ ಮನೆಯಲ್ಲಿ ಒಂದು ಸಣ್ಣಗುಂಪನ್ನು ಪ್ರಾರಂಭಿಸಲು ದೇವರು ನಿಮ್ಮನ್ನು ಕರೆಯುವ ಸಾಧ್ಯತೆಯಿದೆಯೇ? ದೇವರು ನಿಮ್ಮನ್ನು ಏನು ಮಾಡಲು ಪ್ರಭಾವಿಸಿರುವನೋ ಅದರ ಕುರಿತು ನೀವು ಯಾಕೆ ಪ್ರಾರ್ಥಿಸಲು ಪ್ರಾರಂಭಿಸಬಾರದು? ನೀವು ನಿಮ್ಮ ಜೀವನದ ಅತ್ಯಂತ ಆಧ್ಯಾತ್ಮಿಕ ಲಾಭದಾಯಕ ಸಮಯದ ಅಂಚಿನಲ್ಲಿರಬಹುದು.

**ಶುಕ್ರವಾರ** **ಸೆಪ್ಟೆಂಬರ್ 4**

**ಹೆಚ್ಚಿನ ಚಿಂತನೆ :** ಹಲವಾರು ವರ್ಷಗಳ ಹಿಂದೆ ಯುರೋಪಿಯನ್ ಖಂಡದ ಪ್ರಮುಖ ನಗರಗಳಲ್ಲಿ ಒಂದಾದ ಸಣ್ಣ ಸಭೆಯು ದೇವರಿಗಾಗಿ ಯಾವುದಾದರೂ

ಮಹತ್ವ ಕೆಲಸವನ್ನು ಮಾಡಬೇಕೆಂದು ನಿರ್ಧರಿಸಿತು. ಸಭೆ ನಿಂತ ನೀರಾಗಿತ್ತು. ಸುಮಾರು ವರ್ಷಗಳಿಂದ ಯಾರೊಬ್ಬರು ದೀಕ್ಷಾಸ್ನಾನ ತೆಗೆದುಕೊಂಡಿರಲಿಲ್ಲ. ಪ್ರಸ್ತುತ ಸ್ಥಿತಿಯೇ ಮುಂದುವರೆದರೆ, ಸಭೆಗೆ ಅಲ್ಪಭವಿಷ್ಯವಿರುತ್ತದೆ. ಬೋಧಕನು ಹಾಗೂ ಅವನ ಸಭಾ ಸಮಿತಿಯವರು ಮನಃಪೂರ್ವಕವಾಗಿ ಪ್ರಾರ್ಥಿಸಿದರು ಮತ್ತು ಅವರು ಏನು ಮಾಡಬಹುದೆಂದು ಎಚ್ಚರಿಕೆಯಾಗಿ ಪರಿಗಣಿಸಿದರು.

ಅವರು ಹೊಸ ಒಡಂಬಡಿಕೆಯ ಅಧ್ಯಯನವನ್ನು ಮಾಡಿದಾಗ, ಅವರು ಒಂದು ಸಣ್ಣಗುಂಪು ಸೇವೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಸಭೆಯ ಒಂಬತ್ತು ಲೇ ಜನರಿಗೆ ದರ್ಶನ ಬಿತ್ತು. ಅವರು ತಮ್ಮ ಸಣ್ಣ ಗುಂಪು ಸೇವೆಯನ್ನು ಹೇಗೆ ಪರಿಣಾಮಕಾರಿಯಾಗಿ ಸ್ಥಾಪಿಸಬೇಕು ಎಂಬುದನ್ನು ಅಧ್ಯಯನ ಮಾಡಲು ತಮ್ಮನ್ನು ತಾವೇ ಪ್ರಾರ್ಥನೆಗೆ ಒಪ್ಪಿಸಿಕೊಟ್ಟರು. ಶೀಘ್ರದಲ್ಲೇ ಅವರು, ತಮ್ಮ ಪ್ರತಿಯೊಂದು ಮನೆಗಳನ್ನು ಸುವಾರ್ತಾ ಬೋಧಕ ಕೇಂದ್ರವನ್ನಾಗಿ ಮಾರ್ಪಡಿಸಲು ನಿರ್ಧರಿಸಿದರು. ಗುಂಪುಗಳು ತಮಗಿದ್ದ ತಲಾಂತುಗಳನ್ನು ವಿವಿಧ ರೀತಿಯಲ್ಲಿ ಅಭ್ಯಾಸಿಸಲು ಕಲಿತುಕೊಂಡರು. ಅವರು ಪ್ರಾರ್ಥನೆ ಮತ್ತು ಅತಿಥಿ ಸತ್ಕಾರ ಸೇವೆಗಳನ್ನು ಪ್ರಾರಂಭಿಸಿದರು. ಅವರು ಸಮುದಾಯದಲ್ಲಿ ಸ್ನೇಹ ಬೆಳೆಸಿದರು. ಅವರು ತಮ್ಮ ಕುಟುಂಬಕ್ಕೂ, ಸ್ನೇಹಿತರಿಗೂ ಮತ್ತು ಮಾಜಿ ಅಡ್ವೆಂಟಿಸ್ಟ್‌ಗಳಿಗೂ ಕರುಣೆ ತೋರಿಸುವ ಕಾರ್ಯದಿಂದ ಮುಟ್ಟಿದರು. ಸಣ್ಣಗುಂಪು ನಾಯಕರು ಒಂಬತ್ತು ಮನೆಗಳಲ್ಲಿ ನಲವತ್ತು ಅತಿಥಿಗಳ ಹಾಜರಿಯಲ್ಲಿ ಸತ್ಯವೇದ ಅಧ್ಯಯನವನ್ನು ಆರಂಭಿಸಿದರು. ಪವಿತ್ರಾತ್ಮನು ಮಾಡುತ್ತಿರುವುದನ್ನು ನೋಡಿ ಆಶ್ಚರ್ಯಚಕಿತರಾದರು. ಅಂತಿಮವಾಗಿ, ನಲವತ್ತರಲ್ಲಿ ಹದಿನೇಳು ಮಂದಿ ದೀಕ್ಷಾಸ್ನಾನ ಪಡೆದುಕೊಂಡರು. ನಿಂತ ನೀರಾಗಿದ್ದ ಸಣ್ಣ ಸಭೆಯ ಸಾಕ್ಷಿಯೆಂದರೆ, ಆ ಸಣ್ಣ ಗುಂಪುಗಳು ಅಪರಿಮಿತವಾದ ವ್ಯತ್ಯಾಸವನ್ನು ಮಾಡಿತು. ಸಭೆಯ ಸೇವೆಯಲ್ಲಿ ಅನೇಕ ಸಭಾಸದಸ್ಯರು ಭಾಗವಹಿಸುವುದಕ್ಕೆ ಸಣ್ಣಗುಂಪು ದೇವರ ಸಾಧನೆಗಳಲ್ಲಿ ಒಂದಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಲ್ಲಿ ಗುರುವಾರದ ಅಧ್ಯಯನದಲ್ಲಿ ಮುಖ್ಯ ಅಂಶಗಳನ್ನು ಪಟ್ಟಿ ಮಾಡಿದಂತೆ ಪ್ರತಿಯೊಂದು ಸಣ್ಣಗುಂಪಿನಲ್ಲಿ ಮುಂದಿನ ಅಗತ್ಯ ಅಂಶಗಳನ್ನು

ವಿವರಿಸಿ. ಯಾವ ರೀತಿಯ ಇತರ ಚಟುವಟಿಕೆಗಳಲ್ಲಿ ಸಣ್ಣಗುಂಪು ತೊಡಗಿಸಿಕೊಳ್ಳಬಹುದು? ವಿಶೇಷ ತಲಾಂತುಗಳನ್ನು ಹೊಂದಿರುವವರಿಗೆ ಆ ತಲಾಂತುಗಳನ್ನು ಹಿಂದೆಂದಿಗಿಂತಲೂ ಉತ್ತಮವಾಗಿ ಬಳಸಿಕೊಳ್ಳುವುದಕ್ಕೆ ಸಣ್ಣ ಗುಂಪು ಅವರಿಗೆ ಯಾವ ವಿಧಗಳಲ್ಲಿ ನೆರವಾಗುತ್ತದೆ?

2. ಸಣ್ಣಗುಂಪುಗಳು ಹೊರಗಿನ ಸೇವೆಯ ಕಡೆಗೆ ಗಮನಹರಿಸುವುದು ಏಕೆ ತುಂಬಾ ಪ್ರಾಮುಖ್ಯವಾಗಿದೆ? ಅಂದರೆ, ಒಂದು ಗುಂಪು ತನ್ನ ಸದಸ್ಯರನ್ನು ಪೋಷಿಸಲು ಮತ್ತು ಬೆಂಬಲಿಸಲು ಎಷ್ಟೇ ಸಹಾಯ ಮಾಡಿದರೂ, ಅದರ ಉದ್ದೇಶವೂ ಸುವಾರ್ತೆಯನ್ನು ಹರಡುವುದರಲ್ಲಿ ಯಾವಾಗಲೂ ಕೇಂದ್ರೀಕರಿಸಿರಬೇಕು ಏಕೆ? ಸಣ್ಣ ಗುಂಪು ಯಾವಾಗಲೂ ಸ್ಥಳೀಯ ಸಭೆಯೊಂದಿಗೆ ಏಕೆ ಸಂಪರ್ಕ ಹೊಂದಿರಬೇಕು? ಅದು ಏಕೆ ಅಷ್ಟು ಮುಖ್ಯ?

3. ನೀವು ಎಂದಾದರೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದ ಮತ್ತು ಅಂತಿಮವಾಗಿ ನಶಿಸಿಹೋದ ಸಣ್ಣಗುಂಪುಗಳ ಭಾಗವಾಗಿದ್ದೀರಾ ಅಥವಾ ಕೇಳಿಸಿಕೊಂಡಿದ್ದೀರಾ? ಇದು ಏಕೆ ಸಂಭವಿಸಿತೆಂದು ನೀವು ಯೋಚಿಸಿ, ಕಾರಣಗಳನ್ನು ಚರ್ಚಿಸಿ?

4. ಮೇಲಿನ ಕಥೆಯ ಬಗ್ಗೆ ಯೋಚಿಸಿ, ಯೂರೋಪಿನಲ್ಲಿದ್ದ ಸಣ್ಣಗುಂಪಿನ ಸೇವೆ ಏನಾಯಿತು? ಅದು ತುಂಬಾ ಚೆನ್ನಾಗಿ ಕೆಲಸ ಮಾಡಿತೆಂದು ನೀವು ಏಕೆ ಯೋಚಿಸುವಿರಿ? ಅವರು ಏನೇ ಮಾಡಿದರೂ, ಅನೇಕ ವಿಧಗಳಲ್ಲಿ, ತುಂಬಾ ಸರಳ ಮತ್ತು ತುಂಬಾ ಪರಿಣಾಮಕಾರಿಯಾಗಿತ್ತು ಏಕೆ? ನೆರೆಹೊರೆಯವರಿಗೂ ಅಥವಾ ಸಮುದಾಯಕ್ಕೆ ಹೊರಗೆ ತಲುಪುವ ಸುವಾರ್ತೆಯನ್ನು ಪ್ರಾರಂಭಿಸುವ ಪರಿಣಾಮಕಾರಿ ಮಾರ್ಗವಾಗಿ, ಸಭಾ ಕಟ್ಟಡಕ್ಕೆ ವಿರುದ್ಧವಾಗಿ, ಅದು "ಸುರಕ್ಷಿತ" ಮನೆಯ ವಾತಾವರಣದಿಂದ ಏಕೆ ಕೆಲಸ ಮಾಡುತ್ತದೆ?